ಕರ್ನಾಟಕ ವಿಧಾನ ಸಭೆ

132 ಡಾ: ಶರಣ ಪ್ರಕಾಶ ರುದ್ರಪ್ಪ (ಪಾಟೀಲ್ (ಸೇಡಂ)

ಮಾನ್ಯ ತೋಟಗಾರಿಕೆ ಹಾಗೂ ಬಂಧಿಖಾನೆ ಸರಬರಾಜು ಸಚಿವರು

ಅ) ಸೇಡಂ ಪಟ್ಟಣದಲ್ಲಿ ಕಾರಾಗೃಹದ ಹೊಸ ಕಟ್ಟಡ ಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಕಾರಾಗೃಹ ಇಲಾಖೆಯಿಂದ ಸೇಡಂ ಪಟ್ಟಣದಲ್ಲಿ ಕಾರಾಗೃಹದ ಹೊಸ ಕಟ್ಟಡ ಕಟ್ಟಿರುವುದಿಲ್ಲ. ಕಂದಾಯ ಇಲಾಖೆಯ ವಶದಲ್ಲಿರುವ ಹಳೇ ಕಾರಾಗೃಹದ ಕಟ್ಟಡವನ್ನು ಲೋಕೋಪಯೋಗಿ ಇಲಾಖೆಯಿಂದ ದುರಸ್ಥಿಗೊಳಿಸಲಾಗಿದೆ. ಪ್ರಸ್ತುತ ಈ ಉಪ ಕಾರಾಗೃಹವು ಕಾರಾಗೃಹಗಳ ಇಲಾಖೆಯ ವಶದಲ್ಲಿ ಇರುವುದಿಲ್ಲ.

ಆ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭ ಮಾಡಲಾಗುವುದು?

ಪ್ರಶ್ನೆ ಉದ್ಭವಿಸುವುದಿಲ್ಲ.

ಸಂಖ್ಯೆ:ಹೆಚ್‌ಡಿ 53 ಪಿಆರ್‌ಎ 2009

ಸಹಿ/-

(ಉಮೇಶ್ ವಿ. ಕತ್ತಿ)

ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು

(ಟಿ. ಕೃಷ್ಣಮೂರ್ತಿ)

ಸರ್ಕಾರದ ಅಧೀನ ಕಾರ್ಯದರ್ಶಿ,

ಒಳಾಡಳಿತ ಇಲಾಖೆ (ಸೆರಮನೆ ಮತ್ತು ಸಿನಿಮಾ)

ಕರ್ನಾಟಕ ವಿಧಾನ ಸಭೆ

208 ಶ್ರೀ ಎಂ.ಸತ್ಯನಾರಾಯಣ

ಅ) ಮೈಸೂರು ನಗರದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳ ಸಂಖ್ಯೆ ಎಷ್ಟು? ವಿವರ ನೀಡುವುದು.

ಮೈಸೂರು ನಗರದಲ್ಲಿ ಒಟ್ಟು 162 ಗೃಹ ನಿರ್ಮಾಣ ಸಹಕಾರ ಸಂಘಗಳಿದ್ದು, ಈ ಪೈಕಿ 140 ಸಹಕಾರ ಸಂಘಗಳು ಕಾರ್ಯನಿರ್ವಹಿಸುತ್ತಿದ್ದು, 01 ಸಹಕಾರ ಸಂಘ ಸ್ಥಗಿತಗೊಂಡಿದ್ದು, 21 ಸಹಕಾರ ಸಂಘಗಳು ಸಮಾಪನೆಗೊಂಡಿರುತ್ತವೆ.

ಆ) ಬೆಂಗಳೂರಿನಲ್ಲಿ ಸಂಘದ ಕೇಂದ್ರ ಕಛೇರಿ ಹೊಂದಿದ್ದು, ಮೈಸೂರಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಗೃಹ ನಿರ್ಮಾಣ ಸಹಕಾರ ಸಂಘಗಳೆಷ್ಟು? ವಿವರ ನೀಡುವುದು.

ಬೆಂಗಳೂರಿನಲ್ಲಿ ಸಂಘದ ಕೇಂದ್ರ ಕಛೇರಿ ಹೊಂದಿದ್ದು, ಮೈಸೂರು ಜಿಲ್ಲೆಯಲ್ಲೂ ಕಾರ್ಯವ್ಯಾಪ್ತಿ ಹೊಂದಿರುವ ಒಟ್ಟು 28 ಗೃಹ ನಿರ್ಮಾಣ ಸಹಕಾರ

ಸಂಘಗಳಿದ್ದು, ಈ ಪೈಕಿ ಈ ಕೆಳಕಂಡ ಗೃಹ ನಿರ್ಮಾಣ ಸಹಕಾರ ಸಂಘಗಳು ಮೈಸೂರಿನಲ್ಲಿ ಬಡಾವಣೆ ನಿರ್ಮಾಣ ಕಾರ್ಯ ಕೈಗೊಂಡಿರುತ್ತವೆ.

1. ಕೌಟಿಲ್ಯ ಗೃಹ ನಿರ್ಮಾಣ ಸಹಕಾರ ಸಂಘ ನಿ, ಬೆಂಗಳೂರು
2. ಕರ್ನಾಟಕ ಟೆಲಿಕಾಂ ನೌಕರರ ಸಹಕಾರ ಸಂಘ ನಿ, ಬೆಂಗಳೂರು
3. ದಿ ಕಸ್ಟಮ್ಸ್ ಅಂಡ್ ಸೆಂಟ್ರಲ್ ಎಕ್ಸೈಡ್ ಹೌಸ್ ಬಿಲ್ಡಿಂಗ್ ಕೋ ಆಪರೇಟಿವ್ ಸೊಸೈಟಿ ಲಿ, ಬೆಂಗಳೂರು

ಇ) ಮೇಲ್ಕಂಡ ಎರಡೂ ಗೃಹ ನಿರ್ಮಾಣ ಸಹಕಾರ ಸದಸ್ಯರಿಂದ ಸಂಗ್ರಹಿಸಿರುವ ಹಣವೆಷ್ಟು? ಆ ಪೈಕಿ ಜಮೀನುದಾರರಿಗೆ ಬಡಾವಣೆ ಅಭಿವೃದ್ಧಿದಾರರಿಗೆ ನೀಡಿರುವ ಹಣವೆಷ್ಟು? ಪೂರ್ಣ ವಿವರ ನೀಡುವುದು.

ಬೆಂಗಳೂರು ನಗರದಲ್ಲಿ ಕೇಂದ್ರ ಕಛೇರಿ ಹೊಂದಿದ್ದು, ಮೈಸೂರಿನಲ್ಲಿ ಬಡಾವಣೆ ನಿರ್ಮಾಣ ಕಾರ್ಯ ಕೈಗೊಂಡಿರುವ ಮೇಲ್ಕಂಡ 3 ಗೃಹ ನಿರ್ಮಾಣ ಸಹಕಾರ ಸಂಘಗಳು ಹಾಗೂ ಮೈಸೂರಿನಲ್ಲಿ ಬಡಾವಣೆ ನಿರ್ಮಾಣ ಕಾರ್ಯ ಕೈಗೊಂಡಿರುವ 127 ಸಹಕಾರ ಸಂಘಗಳು ಸೇರಿ ಒಟ್ಟು 130 ಗೃಹ ನಿರ್ಮಾಣ ಸಹಕಾರ ಸಂಘಗಳು 111293 ಸದಸ್ಯರುಗಳಿಂದ ಒಟ್ಟು ರೂ.120212.29ಲಕ್ಷಗಳ ಠೇವಣಿಯನ್ನು ಸಂಗ್ರಹಿಸಿರುತ್ತವೆ. ಈ ಪೈಕಿ ಜಮೀನುದಾರರಿಗೆ ರೂ.1051.24ಲಕ್ಷ ಮೊತ್ತವನ್ನು ಮತ್ತು ಅಭಿವೃದ್ಧಿದಾರರಿಗೆ ರೂ.104738.42ಲಕ್ಷ ಮೊತ್ತವನ್ನು ನೀಡಿರುತ್ತವೆ.

ಈ) ಮೈಸೂರು ನಗರದಲ್ಲಿನ ಗೃಹ ನಿರ್ಮಾಣ ಸಹಕಾರ ಸಂಘಗಳು ಹಂಚಿರುವ ನಿವೇಶನಗಳೆಷ್ಟು? ಹಂಚಲಾದ ನಿವೇಶನಗಳ ಪೈಕಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರಿಗೆ ನೀಡಲಾದ ನಿವೇಶನಗಳೆಷ್ಟು? ವಿವರ ನೀಡುವುದು.

ಮೈಸೂರು ನಗರದಲ್ಲಿರುವ ಗೃಹ ನಿರ್ಮಾಣ ಸಹಕಾರ ಸಂಘಗಳು ಒಟ್ಟು 32238 ನಿವೇಶನಗಳನ್ನು ಹಂಚಿಕೆ ಮಾಡಿರುತ್ತವೆ. ಈ ಪೈಕಿ ಪರಿಶಿಷ್ಟ ಜಾತಿ ಸದಸ್ಯರಿಗೆ 4474 ನಿವೇಶನಗಳನ್ನು, ಪರಿಶಿಷ್ಟ ಪಂಗಡದ ಸದಸ್ಯರಿಗೆ 1004 ನಿವೇಶನಗಳನ್ನು ಹಾಗೂ ಹಿಂದುಳೀದ ವರ್ಗದ ಸದಸ್ಯರುಗಳಿಗೆ 6723 ನಿವೇಶನಗಳನ್ನು ಹಂಚಿಕೆ ಮಾಡಿರುತ್ತವೆ.

ಉ) ಮೈಸೂರು ನಗರದ ಸುತ್ತಮುತ್ತ ಇರುವ ಬೋಗಾಧಿ, ಶ್ರೀರಾಂಪುರ, ಹಿನಕಲ್, ಬೆಳವಾಡಿ ಹಾಗೂ ಆಲನಹಳ್ಳಿ ಗ್ರಾಮ ಪಂಚಾಯಿತಿಗಳ ಸುತ್ತಲೂ ಇರುವ ಸರ್ಕಾರಿ ಜಮೀನುಗಳನ್ನು ಗ್ರಾಮ ಪಂಚಾಯಿತಿಯ ಒಪ್ಪಿಗೆ ಪಡೆಯದೆ ಮೂಡಾದವರು 4/1 ಪ್ರಕ್ರಿಯೆ ಮಾಡಿರುವುದರಿಂದ ಗ್ರಾಮದ ಅಭಿವೃದ್ಧಿಗಾಗಿ ಗ್ರಾಮದ ಅಭಿವೃದ್ಧಿಗಾಗಿ ಯಾವುದೇ ಜಮೀನು ಇಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು ಸಾರ್ವಜನಿಕರಿಗೆ ನಿವೇಶನ ಹಂಚಿಕೆ ಉದ್ದೇಶದಿಂದ ಬೋಗಾದಿ, ಹಿನಕಲ್ ಮತ್ತು ಆಲನಹಳ್ಳಿ ಗ್ರಾಮದ ಸರ್ವೆ ನಂಬರ್ ಜಮೀನುಗಳು ಒಳಗೊಂಡಂತೆ ಯೋಜನೆಯನ್ನು ರೂಪಿಸಿ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಿಗಳ ಅಧಿನಿಯಮ 1987ರ ಪ್ರಕರಣ 17(1)ರ ಅಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಸದರಿ ಅಧಿಸೂಚನಾ ಪ್ರತಿಗಳನ್ನು ಆಯಾ ಗ್ರಾಮದ ಪಂಚಾಯ್ತಿ ಮೊದಲ್ಗೊಂಡು ಎಲ್ಲಾ ಸ್ಥಳೀಯ ಸಂಸ್ಥೆ ಹಾಗೂ ಕಛೇರಿಗಳಿಗೆ ಕಳುಹಿಸಿ, ಈ ಬಗ್ಗೆ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಸಲ್ಲಿಸುವಂತೆ 30 ದಿವಸಗಳ ಕಾಲಾವಕಾಶವನ್ನು ನೀಡಲಾಗುತ್ತದೆ ಹಾಗೂ ಕರ್ನಾಟಕ ರಾಜ್ಯಪತ್ರ ಮತ್ತು ಪತ್ರಿಕಾ ಪ್ರಕಟಣೆ ಸಹ ಹೊರಡಿಸಲಾಗುತ್ತದೆ. ಅಲ್ಲದೆ ಸರ್ಕಾರಿ ಜಮೀನುಗಳಲ್ಲಿ ತಾಲ್ಲೂಕು ತಹಸೀಲ್ದಾರ್‌ರವರಿಗೆ ನೇರವಾಗಿ ಪ್ರಕರಣ 17(5)ರ ಅಡಿ ನೋಟೀಸ್ ಜಾರಿ ಮಾಡಿ ಆಕ್ಷೇಪಣೆ ಸಲ್ಲಿಸಲು ಅವಕಾಶ ಮಾಡಿಕೊಡಲಾಗುತ್ತದೆ. ಈ ರೀತಿ ಹೊರಡಿಸಿದ ಪ್ರಾಥಮಿಕ ಅಧಿಸೂಚನೆ ಮತ್ತು ನೋಟೀಸಿಗೆ ಯಾವುದೇ ಆಕ್ಷೇಪಣೆ ಬಂದಿಲ್ಲವೆಂಬುದನ್ನು ಸರ್ಕಾರ ಪ್ರಾಧಿಕಾರದ ಮೂಲಕ ಖಚಿತಪಡಿಸಿಕೊಂಡ ನಂತರವೇ ಪ್ರಾಧಿಕಾರವು ಸಲ್ಲಿಸುವ ಯೋಜನೆಗೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಿಗಳ ಅಧಿನಿಯಮ 1987ರ ಪ್ರಕರಣ 18(3)ರ ಅಡಿ ಯೋಜನಾ ಮಂಜೂರಾತಿಯನ್ನು ನೀಡುತ್ತದೆ.

ಶ್ರೀರಾಂಪುರ ಗ್ರಾಮದ ಸರ್ವೆ ನಂಬರ್ ಜಮೀನುಗಳನ್ನು ಪರಸ್ಪರ ಒಪ್ಪಂದದ ಮೇಲೆ ಪಡೆದು ಬಡಾವಣೆ ರಚಿಸಲಾಗಿರುವುದರಿಂದ ಹಾಗೂ ಬೆಳವಾಡಿ ಗ್ರಾಮದ ಜಮೀನುಗಳನ್ನು ಭೂ ಸ್ವಾಧೀನ ಪ್ರಕ್ರಿಯೆಗೆ ಒಳಪಡಿಸದೇ ಇರುವುದರಿಂದ ಸರ್ಕಾರಿ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಂಡಿರುವ ಪ್ರಶ್ನೆ ಇರುವುದಿಲ್ಲ.

ಊ) ಹಾಗಿದ್ದಲ್ಲಿ, ಈ ಜಮೀನನ್ನು ಯಾವ ನಿಯಮದಡಿ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲಾಗಿದೆ? ವಿವರ ನೀಡುವುದು.

ಈ ಜಮೀನುಗಳನ್ನು ಈ ಮೇಲೆ ತಿಳಿಸಿರುವಂತೆ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಅಧಿನಿಯಮ 1987ರ ಅನ್ವಯ ಭೂ ಸ್ವಾಧೀನಪಡಿಸಿಕೊಳ್ಳಲು ಪ್ರಕರಣ 15(ಬಿ)ರ ಅಡಿ ಸರ್ಕಾರದ ಪೂರ್ವಾನುಮತಿ ಪಡೆದು ಪ್ರಕರಣ 17(1)ರ ಅಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ಭೂಸ್ವಾಧೀನ ಪ್ರಕ್ರಿಯೆ ಕೈಗೊಳ್ಳಲಾಗಿದೆ.

ಸಂಖ್ಯೆ: ಸಿಒ 10 ಸಿಹೆಚ್‌ಎಸ್ 2009

ಸಹಿ/-
(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು

(ಆರ್.ಎಸ್. ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ

ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

324 ಶ್ರೀ ಸುರೇಶ್ ಬಾಬು ಸಿ.ಬಿ.(ಚಿಕ್ಕನಾಯಕನಹಳ್ಳಿ)

ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಸಚಿವರು

ಅ) ಚಿಕ್ಕನಾಯಕನಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿರುವ ನ್ಯಾಯಬೆಲೆ ಅಂಗಡಿಗಳ ಸಂಖ್ಯೆ ಎಷ್ಟು; ವಿವರ ನೀಡುವುದು;

ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಒಟ್ಟು 87 ನ್ಯಾಯಬೆಲೆ ಅಂಗಡಿಗಳಿವೆ.

(ವಿವರ ಅನುಬಂಧದಲ್ಲಿ ತಿಳಿಸಿದೆ)

ಆ) ಒಂದೊಂದು ನ್ಯಾಯಬೆಲೆ ಅಂಗಡಿಗೆ ಹಂಚಿಕೆ ಮಾಡಿರುವ ಪಡಿತರ ಚೀಟಿಗಳ ಸಂಖ್ಯೆ ಎಷ್ಟು;

ಅನುಬಂಧದಲ್ಲಿ ವಿವರಿಸಿದೆ

ಇ) ಅಗತ್ಯಕ್ಕಿಂತ ಹೆಚ್ಚುವರಿಯಾಗಿ ಹಂಚಿಕೆ ಮಾಡಿರುವ ನ್ಯಾಯಬೆಲೆ ಅಂಗಡಿಗಳು ಎಷ್ಟು; ಮತ್ತು ಯಾವುವು;

ಅಗತ್ಯಕ್ಕಿಂತ ಹೆಚ್ಚುವರಿ ಹಂಚಿಕೆ ಮಾಡಿರುವ ನ್ಯಾಯಬೆಲೆ ಅಂಗಡಿಗಳು ಯಾವುದೂ ಇರುವುದಿಲ್ಲ.

ಈ) ಹೆಚ್ಚುವರಿ ಇರುವ ಪಡಿತರ ಚೀಟಿಗಳನ್ನಾಧರಿಸಿ ಹೊಸದಾಗಿ ನ್ಯಾಯಬೆಲೆ ಅಂಗಡಿಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಲಾಗಿದೆಯೇ;

ಹೌದು.

ಉ) ಹಾಗಿದ್ದಲ್ಲಿ, ಗುರುತಿಸಿರುವ ಹೊಸ ನ್ಯಾಯಬೆಲೆ ಅಂಗಡಿಗಳ ಸ್ಥಳಗಳು ಯಾವುವು;

ಅವುಗಳನ್ನು ಎಷ್ಟು ದಿನಗಳಲ್ಲಿ ಪ್ರಾರಂಭಿಸಲಾಗುವುದು?

1) ಕಂಕೆರೆ ಕಾಲೋನಿ, 2) ತಿಮ್ಮನಹಳ್ಳಿ, 3) ಸಾದರಹಳ್ಳಿ, 4) ಗೋಪಾಲಪುರ 5) ಚೌಳಕಟ್ಟೆ 6) ಕಾನ್ಕೆರೆ 7) ಬದನಯ್ಯನತಾಂಡ್ಯ 8) ಕಾಮಲಾಪುರ 9) ಮಾದಾಪುರ ತಾಂಡ್ಯ 10) ದಾಸೀಹಳ್ಳಿ 11) ಕಪ್ಪೂರು 12) ಅನೆಕಟ್ಟೆ 13) ಶೆಟ್ಟಿಕೆರೆ 14) ಸಾಸಲು, 15) ಮಲಗೊಂಡನಹಳ್ಳಿ ಮತ್ತು 16) ಗೋಡೆಕೆರೆ.

ಕರ್ನಾಟಕ ಅಗತ್ಯ ವಸ್ತುಗಳ (ಸಾ.ವಿ.ಪ.) ನಿಯಂತ್ರಣ ಆದೇಶ, 1992 ರ ಕ್ಲಾಸ್ 4 ರನ್ವಯ ಪ್ರಕಟಣೆ ಹೊರಡಿಸಿ, ಮಂಜೂರಾದ ನಂತರ ಪ್ರಾರಂಭಿಸಲಾಗುವುದು.